ಶ್ರೀ ಎಸ್. ಆರ್. ಬೊಮ್ಮಯಿ (ಯೋಜನಾ ಹಾಗೂ ಕಾರ್ಮಿಕಕಂದಾಯ ಮಂತ್ರಿಯವರು).–

ಅ) ಸಕಾಲಕ್ಕೆ ಮಳೆ ಬಾರದಿದ್ದನ್ನು ಗಮನಿಸಿ, ಸಿರಸಿ ತಾಲ್ಲೂಕಿನಲ್ಲಿ ೩೭ ಹಳ್ಳಿಗಳನ್ನು ಹಾಗೂ ಸಿದ್ದಾಪುರ ತಾಲ್ಲೂಕಿನಲ್ಲಿ ೧೩ ಹಳ್ಳಿಗಳನ್ನು ಬರಗಾಲಕ್ಕೆ ತುತ್ತಾಗಿದ್ದ ಹಳ್ಳಿಗಳೆಂದು ಗುರುತಿಸಲಾಗಿದೆ.

ಆ) ಬರಗಾಲಕ್ಕೆ ತುತ್ತಾಗಿರುವ ಎಲ್ಲಾ ಹಳ್ಳಿಗಳನ್ನು ಗುರುತಿಸಿ ಪರಿಹಾರ ಕಾರ್ಯಕ್ರಮಗಳನ್ನು ತೆಗೆದು ಕೊಂಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

೧೯೮೬-೮೭ನೇ ಸಾಲಿನ ಬೆಳೆ ಸಾಲಗಳ ಬಡ್ಡಿ ಮನ್ನಾ ಮಾಡುವ ಬಗ್ಗೆ

೧೦೮ (೯೩) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

(ಅ) ರಾಜ್ಯದಲ್ಲಿ ೧೯೮೬-೮೭ ಸಾಲಿನಲ್ಲಿ ಕೊಟ್ಟಿರುವ ಬೆಳೆ ಸಾಲ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು)

(ಆ) ಹಿಂದಿನ ವರ್ಷದ ಬೆಳೆ ಸಾಲ ವಸೂಲಾತಿಯಾಗಿಲ್ಲವೆಂಬ ಕಾರಣಕ್ಕಾಗಿ ಎಷ್ಟು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳನ್ನು ಹಾಗೂ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗಳನ್ನು ತಪ್ಪಿತಸ್ಥರೆಂದು ಘೋಷಿಸಲಾಗಿದೆ ?

(ಇ) ೧೯೮೫-೮೬ ರಲ್ಲಿ ರೈತರಿಗೆ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದಂತೆ ೧೯೮೬-೮೭ರ ಸಾಲಿನ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

(ಅ) ೧೯೮೬-೮೭ನೇ ಆರ್ಥಿಕ ವರ್ಷದಲ್ಲಿ ಏಪ್ರಿಲ್ ೮೬ರ ಪ್ರಾರಂಭದಿಂದ ಡಿಸೆಂಬರ್ ೮೬ರ ಅಂತ್ಯದ ವರೆಗೆ ರಾಜ್ಯದಲ್ಲಿರುವ ೧೯ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳು, ಒಟ್ಟು ರೂ. ೮೯೫೩-೧೨ ಲಕ್ಷಗಳ ಬೆಳೆ ಸಾಲವನ್ನು ವಿತರಣೆ ಮಾಡಿದೆ. (ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಿದೆ.)

(ಆ) ಸಾಲ ವಸೂಲಾಗಿಲ್ಲವೆಂಬ ಕಾರಣಕ್ಕಾಗಿ ಜಿಲ್ಲಾ ಬ್ಯಾಂಕ್ ಅಥವಾ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗಳನ್ನು ತಪ್ಪಿತಸ್ಥರೆಂದು ಘೋಷಿಸುವ ಪದ್ಧತಿ ಇರುವುದಿಲ್ಲ.

(ಇ) ೧೯೮೫-೮೬ನೇ ಸಾಲಿನಲ್ಲಿ ಸುಸ್ತಿ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಿರುವುದಿಲ್ಲ. ೧೯೮೬-೮೭ನೇ ಸಾಲಿನಲ್ಲಿ ಮನ್ನಾ ಮಾಡುವ ಪ್ರಶ್ನೆಯೂ ಸರಕಾರದ ಪರಿಶೀಲನೆಯಲ್ಲಿಲ್ಲ.

ಅನುಬಂಧ

೧೯೮೬-೮೭ನೇ ಆರ್ಥಿಕ ವರ್ಷದಲ್ಲಿ ೧-೪-೧೯೮೬ ರಿಂದ ೩೧-೧೨-೧೯೮೬ರ ವರೆಗೆ ನೀಡಲಾದ ಬೆಳೆ ಸಾಲದ ವಿವರ.

ಲಕ್ಷ ರೂ. ಗಳಲ್ಲಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಿತರಿಸಲಾದ ಅಲ್ಪಾವಧಿ ಸಾಲ
೧.	ಬೆಂಗಳೂರು	೪೩೭–೪೨
೨.	ಕೋಲಾರ	೧೩೪–೧೫
೩.	ಚಿತ್ರದುರ್ಗ	೨೪೭–೦೯
೪.	ಶಿವಮೊಗ್ಗ	೩೫೧–೮೦
೫.	ತುಮಕೂರು	೩೫೬–೩೫
೬.	ಮೈಸೂರು	೧೪೦–೪೦

೧	೨	೩
೭.	ಮಂಡ್ಯ	೫೪೪–೮೦
೮.	ಹಾಸನ	೧೧೨–೦೫
೯.	ದಕ್ಷಿಣಕನ್ನಡ	೧೦೫೯–೯೦
೧೦.	ಕೊಡಗು	೮೧೫–೧೪
೧೧.	ಚಿಕ್ಕಮಗಳೂರು	೨೪೯–೯೯
೧೨.	ಬೆಳಗಾವಿ	೧೫೮೨–೨೨
೧೩.	ಬಿಜಾಪುರ	೪೦೦–೬೪
೧೪.	ಧಾರವಾಡ	೬೮೨–೭೬
೧೫.	ಉತ್ತರಕನ್ನಡ	೫೪೮–೪೫
೧೬.	ಗುಲ್ಬರ್ಗಾ	೯೫–೫೩
೧೭.	ಬೀದರ್	೫೭೭–೫೧
೧೮.	ರಾಯಚೂರು	೧೮೮–೫೭
೧೯.	ಬಳ್ಳಾರಿ	೨೯೮–೪೫
		೮೯೨೩–೧೨

ಅಂಗನವಾಡಿಗಳ ಬಗ್ಗೆ

೧೧೨ (೨೮೨) ಶ್ರೀ ಚಂದ್ರಶೇಖರ ಪಾಮಾನಿ (ಪರಸಗಡ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ರಾಜ್ಯದಲ್ಲಿ ಎಷ್ಟು ಐ. ಸಿ. ಡಿ. ಎಸ್. ಬ್ಲಾಕ್‌ಗಳನ್ನು ಪ್ರಾರಂಭಿಸಲಾಗಿದೆ, ಹಾಗೂ ಸಮಿತಿ ತಾಲ್ಲೂಕಿನಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ ಮತ್ತು ಇವುಗಳ ಕಾರ್ಯಕ್ರಮವೇನು ?

(ಆ) ಈ ಕೇಂದ್ರಗಳಿಗೆ ವೈದ್ಯಕೀಯ ಸೌಲಭ್ಯ ಕಲ್ಪಿಸಲಾಗಿದೆಯೆ ?

(ಇ) ಹಾಗಿದ್ದಲ್ಲಿ, ಪ್ರತಿ ಕೇಂದ್ರಕ್ಕೆ ವೈದ್ಯರು ಭೇಟಿ ನೀಡಿ ಚಿಕಿತ್ಸೆ ನೀಡುವರೆ ?

(ಈ) ಸಮಿತಿ ಐ. ಸಿ. ಡಿ. ಎಸ್. ಬ್ಲಾಕ್‌ದಿಂದ ಸರಕಾರದ ಆದೇಶ ಕ್ರಮ ಸಂಖ್ಯೆ ಎಸ್‌ಡಬ್ಲ್ಯೂಎಲ್ ೯೩ ಎಸ್‌ಡಬ್ಲ್ಯೂಡಬ್ಲ್ಯೂ ೮೧ ದಿನಾಂಕ ೨೨–೩–೧೯೮೨ರ ಪ್ರಕಾರ ಈ ಯೋಜನೆಗಳಲ್ಲಿ ಲಾಭ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು ? (ಗ್ರಾಮವಾರು ವಿವರ ನೀಡುವುದು)

ಶ್ರೀ ಜಿ. ಬಸವಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

(ಅ) ರಾಜ್ಯದಲ್ಲಿ ೯೪ ಐ. ಸಿ. ಡಿ. ಎಸ್. ಬ್ಲಾಕ್‌ಗಳನ್ನು ಪ್ರಾರಂಭಿಸಲಾಗಿದೆ. ಸಮಿತಿ ತಾಲ್ಲೂಕಿನಲ್ಲಿ ೨೨೨ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಇವುಗಳು ಮಕ್ಕಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸುತ್ತಿವೆ.

೧. ಪೂರಕ ಪೌಷ್ಟಿಕ ಆಹಾರ
೨. ಅನೌಪಚಾರಿಕ ಶಾಲಾಪೂರ್ವ ಶಿಕ್ಷಣ
೩. ಆರೋಗ್ಯ ತಪಾಸಣೆ
೪. ರೋಗ ನಿರೋಧಕ ಚುಚ್ಚುಮದ್ದು ನೀಡುವಿಕೆ.
೫. ಸಂಚಾರ ಸೇವೆ.